## ಆರ್ಥಿಕ ಸಚಿವಾಲಯ

**ವಿಷಯ :** ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯನ್ನು ಪುನರ್ ರಚನೆ-ಹುದ್ದೆಗಳ ಸೃಜನೆ, ಹುದ್ದೆಗಳ ಸ್ಥಳಾಂತರ, ಮರುಪದನಾಮೀಕರಣ ಇವುಗಳನ್ನು ನಿಗದಿಪಡಿಸಿ ಆದೇಶ ಹೊರಡಿಸುವ ಬಗ್ಗೆ.

**ಓದಲಾಗಿದೆ :**

1. ನಿಯಂತ್ರಕರು ರಾಜ್ಯ ಲೆಕ್ಕಪತ್ರ ಇಲಾಖೆ, ಇವರ ಪ್ರಸ್ತಾವನೆ ಸಂಖ್ಯೆ:ರಾಲೆಪ/5/ಇಟಿಪಿ/2010/6277 ದಿನಾಂಕ:20.01.2012.
2. ಸರ್ಕಾರದ ಆದೇಶ ಸಂಖ್ಯೆ:ಆಇ 224 ರಾಲೆಪ 2012 ದಿ:02.03.2015.
3. ನಿಯಂತ್ರಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಇವರ ಪತ್ರ ಸಂ:ಸಿಎಸ್ಎ/1/ಐಡಿಎಫ್/2012/2014-15 ದಿನಾಂಕ:04.03.2015.

**ಪ್ರಸ್ತಾವನೆ :**

1) ಮೇಲೆ ಓದಲಾದ (1) ರ ದಿ:20.01.2012ರ ಪ್ರಸ್ತಾವನೆಯಲ್ಲಿ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ ಇವರು ರಾಜ್ಯ ಲೆಕ್ಕಪತ್ರ ಇಲಾಖೆಯ (ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಎಂದು ಮರುಪದನಾಮೀಕರಿಸಿರುವ) ಪುನರ್ ರಚನೆಯ ಪ್ರಸ್ತಾವನೆ ಸಲ್ಲಿಸಿ, ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳಾದ ನಗರಪಾಲಿಕೆಗಳು, ನಗರಸಭೆ, ಪುರಸಭೆ, ಪಟ್ಟಣ ಪಂಚಾಯ್ತಿ, ಗ್ರಾಮ ಪಂಚಾಯತಿ ಒಳಗೊಂಡಂತೆ ಇತರೆ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳ ಲೆಕ್ಕಗಳ ಲೆಕ್ಕಪರಿಶೋಧನೆ ಕಾರ್ಯವನ್ನು ನಿರ್ವಹಿಸುತ್ತಿರುವುದಾಗಿಯೂ ಮತ್ತು ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆ/ಸಂಸ್ಥೆಗಳಿಗೆ ಹಣಕಾಸು ಅಧಿಕಾರಿಗಳು/ಆರ್ಥಿಕ ಸಲಹೆಗಾರರು, ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಇತರೆ ಸಿಬ್ಬಂದಿಗಳನ್ನು ಆಯಾ ಸಂಸ್ಥೆಗಳ ಲೆಕ್ಕಪತ್ರಗಳನ್ನು ನಿರ್ವಹಿಸಲು ಮತ್ತು ಆಂತರಿಕ ಲೆಕ್ಕಪರಿಶೋಧನೆ ಕೈಗೊಳ್ಳಲು ನಿಯೋಜಿಸಲಾಗುತ್ತಿದೆ. ಹಾಗೂ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಿಂದ ಕೈಗೊಳ್ಳಲಾಗುತ್ತಿರುವ ಲೆಕ್ಕಪರಿಶೋಧನೆ ಕಾರ್ಯವನ್ನು ಕೆಳಕಂಡ ಮೂರು ಪ್ರತ್ಯೇಕ ವಿಭಾಗಗಳಲ್ಲಿ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿರುತ್ತಾರೆ.

i. ಇಪ್ಪತ್ತೊಂಭತ್ತು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳ ಮೂಲಕ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿಗಳು, ಗ್ರಾಮ ಪಂಚಾಯಿತಿಗಳು, ಪ್ರಾಧಿಕಾರಗಳು, ಮಂಡಳಿಗಳು, ಮುಜರಾಯಿ ಸಂಸ್ಥೆಗಳು ಇತ್ಯಾದಿ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆ;

ii. ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಮುಖ್ಯ ಲೆಕ್ಕಪರಿಶೋಧಕರ ಮೂಲಕ ಮಹಾನಗರ ಪಾಲಿಕೆಗಳ ಲೆಕ್ಕಪರಿಶೋಧನೆ ಮತ್ತು

iii. ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಸರ್ಕಾರಿ ಲೆಕ್ಕಪರಿಶೋಧಕರುಗಳ ಮೂಲಕ ವಿಶ್ವವಿದ್ಯಾಲಯಗಳ ಲೆಕ್ಕಪರಿಶೋಧನೆ ಕೈಗೊಳ್ಳಲಾಗುತ್ತಿದೆ.

2) ವಿಶ್ವವಿದ್ಯಾಲಯಗಳ ಸರ್ಕಾರಿ ಲೆಕ್ಕಪರಿಶೋಧಕರ ಕಛೇರಿಗಳು, ಮಹಾನಗರ ಪಾಲಿಕೆಗಳ ಮುಖ್ಯ ಲೆಕ್ಕಪರಿಶೋಧಕರ ಕಛೇರಿಗಳು ಮತ್ತು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಗಳು, ಇಲಾಖೆಯ ಪ್ರಾರಂಭದ ಸಮಯದಲ್ಲಿ ಮಂಜೂರಾಗಿದ್ದ ಅಧಿಕಾರಿ ಮತ್ತು ಸಿಬ್ಬಂದಿಗಳಿಂದಲೇ ಕಾರ್ಯ ನಿರ್ವಹಿಸುತ್ತಿದ್ದು, ಸದರಿ ಸಂಸ್ಥೆಗಳ ಸಂಖ್ಯೆ, ಆರ್ಥಿಕ ವ್ಯವಹಾರ ಮತ್ತು ಸರ್ಕಾರದಿಂದ ಬಿಡುಗಡೆಯಾಗುವ ಅನುದಾನಗಳಲ್ಲಿ ಅಂದಿನಿಂದ ಇಂದಿನವರೆಗೆ ಗಣನೀಯ ಹೆಚ್ಚಳವಾಗಿದ್ದು ಅವುಗಳ ಕಾರ್ಯನಿರ್ವಹಣೆ ವ್ಯಾಪ್ತಿಗಳಿಗನುಗುಣವಾಗಿ ಲೆಕ್ಕಪರಿಶೋಧನೆಗೆ ಹೆಚ್ಚುವರಿ ಸಿಬ್ಬಂದಿ ಮಂಜೂರು ಮಾಡುವ ಅವಶ್ಯಕತೆ ಇದೆಯೆಂದು ಪ್ರಸ್ತಾಪಿಸಿದ್ದಾರೆ.

3) ಈ ಹಿನ್ನೆಲೆಯಲ್ಲಿ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಗಳನ್ನು ಬಲಪಡಿಸಲು ಹಾಗೂ ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿಗಳಲ್ಲಿ 4 ಪ್ರಾಂತೀಯ ಕಛೇರಿಗಳನ್ನು ಪ್ರಾರಂಭಿಸಿ, ಸ್ಥಳೀಯ ಸಂಸ್ಥೆಗಳ ಮತ್ತು ವಿಶ್ವವಿದ್ಯಾಲಯಗಳ ಲೆಕ್ಕಪರಿಶೋಧನೆಯ ಮೇಲ್ವಿಚಾರಣೆಯನ್ನು ಪ್ರಾಂತೀಯ ಕಛೇರಿಗಳ ಮೂಲಕ ಕೈಗೊಳ್ಳಲು ಉದ್ದೇಶಿಸಿ ಇಲಾಖೆಯ ಪುನರ್ ರಚನೆಗೆ ಅನುಸಾರವಾಗಿ ಲೆಕ್ಕಪರಿಶೋಧನೆ ವಿಭಾಗದಲ್ಲಿನ ಗ್ರೂಪ್-ಎ ವೃಂದದಲ್ಲಿನ ಹುದ್ದೆಗಳ ಪದನಾಮವನ್ನು ಮರು ಪದನಾಮೀಕರಿಸಲು ಪ್ರಸ್ತಾಪಿಸಿದ್ದಾರೆ. ಸದರೀ ಪ್ರಸ್ತಾವನೆಯನ್ನು ಪರಿಶೀಲಿಸಿ ಮೇಲೆ (2)ರಲ್ಲಿ ಓದಲಾದ 02.03.2015ರ ಸರ್ಕಾರದ ಆದೇಶದಲ್ಲಿ ರಾಜ್ಯ ಲೆಕ್ಕಪತ್ರ ಇಲಾಖೆಯ ಹೆಸರನ್ನು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಎಂದು ಮರುನಾಮಕರಣಗೊಳಿಸಲಾಗಿದೆ. ಇದರ ತರುವಾಯ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪುನರ್ ರಚನೆಯನ್ನು ಪರಿಶೀಲಿಸಿದ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

**ಸರ್ಕಾರದ ಆದೇಶ ಸಂಖ್ಯೆ : ಆಇ 331 ರಾಲೆಪ 2014, ಬೆಂಗಳೂರು, ದಿನಾಂಕ : 18-05-2015.**

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಸನ್ನಿವೇಶಗಳಿಂದಾಗಿ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಪುನರ್ ರಚಿಸಲು ಈ ಮೂಲಕ ಸರ್ಕಾರದ ಅನುಮೋದನೆ ನೀಡಲಾಗಿದೆ:-

1. ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಕಲಬುರಗಿಗಳಲ್ಲಿ 4 ಪ್ರಾಂತೀಯ ಕಛೇರಿಗಳ ಸೃಜನೆ.

2. ನಾಲ್ಕು ಪ್ರಾಂತೀಯ ಕಛೇರಿಗಳ ವ್ಯಾಪ್ತಿಯಲ್ಲಿ ಬರುವ ವಿಶ್ವವಿದ್ಯಾಲಯಗಳಲ್ಲಿ ಇರುವ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಸರ್ಕಾರಿ ಲೆಕ್ಕ ಪರಿಶೋಧಕರ ಕಛೇರಿಗಳನ್ನು ಅವುಗಳಿಗೆ ಮಂಜೂರಾಗಿರುವ ಹುದ್ದೆಗಳೊಂದಿಗೆ ಅನುಬಂಧ–1ರಲ್ಲಿ ನಮೂದಿಸಿರುವಂತೆ ಆಯಾ ಪ್ರಾಂತೀಯ ಕಛೇರಿಗಳೊಂದಿಗೆ ಈ ಕೆಳಕಂಡಂತೆ ವಿಲೀನಗೊಳಿಸತಕ್ಕದ್ದು.

| **ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಪ್ರಾಂತೀಯ ಕಛೇರಿ** | **ವಿಲೀನಗೊಳ್ಳುತ್ತಿರುವ ವಿಶ್ವವಿದ್ಯಾನಿಲಯಗಳು (ಅನುಬಂಧ–1ರಲ್ಲಿನ ಹುದ್ದೆಗಳೊಂದಿಗೆ)** |
|---|---|
| 1. ಬೆಂಗಳೂರು ಪ್ರಾಂತೀಯ ಕಛೇರಿ | 1. ಬೆಂಗಳೂರು ವಿಶ್ವವಿದ್ಯಾಲಯ<br>2. ಜಿ.ಕೆ.ವಿ.ಕೆ ಬೆಂಗಳೂರು (ಕೇಂದ್ರ ಕಚೇರಿಗೆ ಸ್ಥಳಾಂತರಿಸಿದ ಜಂಟಿ ನಿಯಂತ್ರಕರ ಹುದ್ದೆಯನ್ನು ಹೊರತುಪಡಿಸಿ)<br>3. ತುಮಕೂರು ವಿಶ್ವವಿದ್ಯಾಲಯ |
| 2. ಮೈಸೂರು ಪ್ರಾಂತೀಯ ಕಛೇರಿ: | 1. ಮೈಸೂರು ವಿಶ್ವವಿದ್ಯಾಲಯ<br>2. ಮಂಗಳೂರು ವಿಶ್ವವಿದ್ಯಾಲಯ<br>3. ಕುವೆಂಪು ವಿಶ್ವವಿದ್ಯಾಲಯ ಶಿವಮೊಗ್ಗ |
| 3. ಬೆಳಗಾವಿ ಪ್ರಾಂತೀಯ ಕಛೇರಿ: | 1. ಕೃಷಿ ವಿಶ್ವವಿದ್ಯಾಲಯ, ಧಾರವಾಡ<br>2. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ<br>3. ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ |
| 4. ಕಲಬುರಗಿ ಪ್ರಾಂತೀಯ ಕಛೇರಿ: | 1. ಕಲಬುರಗಿ ವಿಶ್ವವಿದ್ಯಾಲಯ |

3. ಮಹಾನಗರ ಪಾಲಿಕೆಗಳ ಮುಖ್ಯ ಲೆಕ್ಕಪರಿಶೋಧಕರ ಕಛೇರಿಗಳಲ್ಲಿನ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ಅಧಿಕಾರಿ/ಸಿಬ್ಬಂದಿಗೆ ಮೀಸಲಿರಿಸಿ ಗುರುತಿಸಿರುವ 76 ವಿವಿಧ ಹುದ್ದೆಗಳನ್ನು ಅನುಬಂಧ–2ರಂತೆ ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗೆ ಸ್ಥಳಾಂತರಿಸತಕ್ಕದ್ದು ಪ್ರಾಂತೀಯ ಕಛೇರಿಗೆ ಹುದ್ದೆಗಳ ವಿಲೀನವಾಗುತ್ತಿರುವ ಅಧಿಕಾರಿ/ಸಿಬ್ಬಂದಿ ವರ್ಗಾವಣೆ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

4. ಅನುಬಂಧ–3 ಮತ್ತು ಅದಕ್ಕೆ ಲಗತ್ತಾದ 1 ರಿಂದ 13 ಕೋಷ್ಟಕಗಳಲ್ಲಿ ವಿವರಿಸಿರುವಂತೆ 297 ವಿವಿಧ ಹುದ್ದೆಗಳನ್ನು ಲೆಕ್ಕಪರಿಶೋಧನಾ ವಿಭಾಗದಲ್ಲಿ ಸೃಜಿಸಲು ಹಾಗೂ ಆ ಸದರಿ ಹುದ್ದೆಗಳಲ್ಲಿ 182 ಹುದ್ದೆಗಳನ್ನು ನೇರ ನೇಮಕಾತಿ ಹಾಗೂ 115 ಹುದ್ದೆಗಳನ್ನು ಮುಂಬಡ್ತಿ ಮುಖಾಂತರ ಭರ್ತಿ ಮಾಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

5. ವಿವಿಧ ಇಲಾಖೆಗಳಲ್ಲಿ/ಸಂಸ್ಥೆಗಳಲ್ಲಿ ಗ್ರೂಪ್–ಎ ವೃಂದಗಳ ಪದನಾಮವನ್ನು ಲೆಕ್ಕಪರಿಶೋಧನೆ ವಿಭಾಗಕ್ಕೆ ಸಂಬಂಧಿಸಿದಂತೆ ಲೆಕ್ಕಪತ್ರ ವಿಭಾಗದಿಂದ ಲೆಕ್ಕ ಪರಿಶೋಧನೆ ವಿಭಾಗಕ್ಕೆ ನೇಮಕವಾದ ಸಂದರ್ಭದಲ್ಲಿ ಪದನಾಮವು ಸ್ವಯಂಚಾಲಿತವಾಗಿ ಅನುಬಂಧ–4 ರಲ್ಲಿ ನಮೂದಿಸಿರುವಂತೆ ಮರುಪದನಾಮೀಕರಣವಾಗುತ್ತದೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗೆ ಇಲಾಖೆ (ಸೇವೆಗಳು–6)ಯ ತಾತ್ವಿಕ ಅನುಮೋದನೆ ಹಾಗೂ ಸಹಮತಿಯನ್ನು ಟಿಪ್ಪಣಿ ಸಂಖ್ಯೆ:ಸಿಆಸುಇ/531/ಸಉಸೇ/2014, ದಿನಾಂಕ:07–02–2015ರಲ್ಲಿ ಪಡೆದು ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಎನ್.ಲಕ್ಷ್ಮಣ**

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡ)

## ಅನುಬಂಧ–1

**ಸರ್ಕಾರದ ಆದೇಶ ಸಂಖ್ಯೆ: ಆಇ 331 ರಾಲೆಪ 2014, ದಿನಾಂಕ: 18.05.2015**

**ಪ್ರಾಂತೀಯ ಕಛೇರಿಗಳಿಗೆ ವಿಲೀನಗೊಳ್ಳಬೇಕಾದ ವಿಶ್ವವಿದ್ಯಾಲಯಗಳ ಸರ್ಕಾರಿ ಲೆಕ್ಕಪರಿಶೋಧಕರ ಕಛೇರಿಗಳ ಹುದ್ದೆಗಳು**

| ಕ್ರ.ಸಂ. | ಪ್ರಾಂತೀಯ ಕಛೇರಿ | ವಿಶ್ವವಿದ್ಯಾಲಯಗಳು | ಜಂಟಿ ನಿಯಂತ್ರಕರು | ಉಪ ನಿಯಂತ್ರಕರು | ಲೆಕ್ಕಪರಿಶೋಧನ ಅಧಿಕಾರಿಗಳು | ಲೆಕ್ಕ ಸಹಾಯಕರು | ಕಿರಿಯ ಲೆಕ್ಕ ಸಹಾಯಕರು | ಶೀಘ್ರ ಲಿಪಿಗಾರರು | ಬೆರಳಚ್ಚು ಗಾರರು | ಗ್ರೂಪ್ 'ಡಿ' ನೌಕರರು | ಷರಾ |
|---|---|---|---|---|---|---|---|---|---|---|---|
| 1 | ಬೆಂಗಳೂರು | **ಬೆಂಗಳೂರು ವಿ.ವಿ.** | **–** | **01** | **02** | **09** | **01** | **01** | **01** | **01** | |
| | | ಜಿ.ಕೆ.ವಿ.ಕೆ ಬೆಂಗಳೂರು | 01 | – | 03 | 14 | 01 | – | 01 | 01 | ಜಂಟಿ ನಿಯಂತ್ರಕರ ಹುದ್ದೆಯನ್ನು ಕೇಂದ್ರ ಕಛೇರಿಗೆ ಸ್ಥಳಾಂತರಿಸಿದೆ |
| | | ತುಮಕೂರು ವಿ.ವಿ | – | 01 | 02 | 04 | 01 | – | 01 | 02 | |
| 2 | ಮೈಸೂರು | ಮೈಸೂರು ವಿ.ವಿ | – | 01 | 02 | 10 | 01 | – | 01 | 03 | |
| | | ಮಂಗಳೂರು ವಿ.ವಿ. | – | 01 | 01 | 03 | – | – | 01 | 01 | |
| | | ಕುವೆಂಪು ವಿ.ವಿ. | – | 01 | 01 | 03 | 01 | – | 01 | 01 | |
| 3 | ಬೆಳಗಾವಿ | ಕೃಷಿ ವಿ.ವಿ ಧಾರವಾಡ | – | 01 | 02 | 10 | 01 | – | 01 | 01 | |
| | | ಕರ್ನಾಟಕ ವಿ.ವಿ. ಧಾರವಾಡ | – | 01 | 02 | 10 | 01 | – | 01 | 03 | |
| | | ಮಹಿಳಾ ವಿ.ವಿ. ವಿಜಯಪುರ | – | 01 | 02 | 04 | 01 | – | 01 | 02 | |
| 4 | ಕಲಬುರಗಿ | ಕಲಬುರಗಿ ವಿ.ವಿ. | – | 01 | 01 | 04 | 01 | – | 01 | 01 | |

**ಎನ್.ಲಕ್ಷ್ಮಣ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

## ಅನುಬಂಧ–2

**ಸರ್ಕಾರದ ಆದೇಶ ಸಂಖ್ಯೆ: ಆಇ 331 ರಾಲೆಪ 2014, ದಿನಾಂಕ: 18.05.2015.**

**(ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಗೆ ಸ್ಥಳಾಂತರಿಸಲಾದ ಹುದ್ದೆಗಳು)**

| ಕ್ರ.ಸಂ. | ಮಹಾನಗರ ಪಾಲಿಕೆ | ಜಂಟಿ ನಿಯಂತ್ರಕರು | ಲೆಕ್ಕ ಪರಿಶೋಧನಾ ಅಧಿಕಾರಿ | ಲೆಕ್ಕ ಅಧೀಕ್ಷಕರು | ಲೆಕ್ಕ ಸಹಾಯಕರು | ಶೀಘ್ರ ಲಿಪಿಗಾರರು | ಕಿರಿಯ ಸಹಾಯಕರು | ಬೆರಳಚ್ಚು ಗಾರರು | ಚಾಲಕರು | ಗ್ರೂಪ್ 'ಡಿ' ನೌಕರರು | ಒಟ್ಟು |
|---|---|---|---|---|---|---|---|---|---|---|---|
| **1** | ಬೆಳಗಾವಿ | 1 | 1 | – | 2 | 1 | – | 3 | 2 | 2 | **12** |
| **2** | ಮೈಸೂರು | 1 | 2 | – | 3 | 1 | – | 3 | 1 | 2 | **13** |
| **3** | ಮಂಗಳೂರು | 1 | 1 | 2 | 3 | 1 | – | 3 | 1 | | **14** |
| **4** | ಹುಬ್ಬಳ್ಳಿ – ಧಾರವಾಡ | 1 | 1 | 2 | 2 | – | 1 | 2 | 1 | | **12** |
| **5** | ಕಲಬುರಗಿ | 1 | 1 | – | 2 | – | – | 2 | 1 | 2 | **8** |
| **6** | ದಾವಣಗೆರೆ | 1 | 1 | – | 2 | 1 | – | 2 | 1 | 2 | **9** |
| **7** | ಬಳ್ಳಾರಿ | 1 | 1 | – | 2 | – | – | 2 | 1 | 1 | **8** |
| | **ಒಟ್ಟು** | **7** | **8** | **4** | **16** | **4** | **1** | **17** | **8** | **11** | **76** |

**ಎನ್.ಲಕ್ಷ್ಮಣ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

## ಅನುಬಂಧ–3

**ಸರ್ಕಾರದ ಆದೇಶ ಸಂಖ್ಯೆ: ಆಇ 331 ರಾಲೆಪ 2014, ದಿನಾಂಕ: 18.05.2015**

| ಕ್ರಸಂ | ವೃಂದದ ಹೆಸರು | ಹುದ್ದೆಗಳ ಸಂಖ್ಯೆ | | | | ನೇಮಕಾತಿ ವಿಧಾನ (ಅಂಕಣ–4) | | ವೇತನ ಶ್ರೇಣಿ | ಷರಾ |
|---|---|---|---|---|---|---|---|---|---|
| | | ಹಾಲಿ ಇರುವ ಹುದ್ದೆಗಳು | | | ಸೃಜಿಸಲಾದ ಹುದ್ದೆಗಳು | ನೇರ ನೇಮಕಾತಿ | ಮುಂಬಡ್ತಿ | | |
| | | ಇಲಾಖೆಯ ಹುದ್ದೆಗಳು | ಇತರೆ ಇಲಾಖೆ/ನಿಗಮ ಮಂಡಳಿಗಳು/ ನಿಯೋಜನೆ ಹುದ್ದೆಗಳು | ಒಟ್ಟು ಹುದ್ದೆಗಳು | | | | | |
| **1** | **2** | **3** | | | **4** | **5** | **6** | **7** | **8** |
| **1** | ಪ್ರಧಾನ ನಿರ್ದೇಶಕರು ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ Principal Director of Accounts and Audit | – | – | – | 1 | – | ಮುಂಬಡ್ತಿ | 56550–79800 | ಈ ಹುದ್ದೆಯನ್ನು ಮುಬಂಡ್ತಿ ಮೂಲಕ ತುಂಬುವ ಕಾರ್ಯವಿಧಾನವನ್ನು ಪ್ರತ್ಯೇಕವಾಗಿ ನಿಗದಿಪಡಿಸಲಾಗುವುದು |
| **2** | ನಿರ್ದೇಶಕರು (Director) | 1 | – | 1 | – | – | – | 52000–73000 | ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕರ ಹುದ್ದೆಯನ್ನು ಮರು ಪದನಾಮೀಕರಿಸುವುದು |
| **3** | ಅಪರ ನಿರ್ದೇಶಕರು (Additional Director) | 2 | 7 | 9 | 4 | – | 4 | 44250–60600 | ಅಪರ ನಿಯಂತ್ರಕರ ಹುದ್ದೆಯನ್ನು ಮರು ಪದನಾಮೀಕರಿಸಿರುವುದು ನಾಲ್ಕು ಪ್ರಾಂತೀಯ ಕಛೇರಿಗಳಿಗೆ ನಾಲ್ಕು ಅಪರ ನಿರ್ದೇಶಕರ ಹುದ್ದೆಗಳನ್ನು ಸೃಜಿಸಲಾಗಿದೆ. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 1ರಲ್ಲಿ ನೀಡಲಾಗಿದೆ. |
| **4** | ಜಂಟಿ ನಿರ್ದೇಶಕರು (Joint Director) | 11 | 95 | 106 | 2 | – | 2 | 40050–56550 | ಜಂಟಿ ನಿಯಂತ್ರಕರ ಹುದ್ದೆಯನ್ನು ಮರು ಪದ ನಾಮೀಕರಿಸಿರುವುದು ಮಹಾನಗರ ಪಾಲಿಕೆಗಳು ಇರುವ ಜಿಲ್ಲೆಗಳ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ ಜಂಟಿ ನಿರ್ದೇಶಕರ ಹುದ್ದೆಗಳನ್ನು ಸೃಜಿಸಲು ಉದ್ದೇಶಿಸಲಾಗಿದ್ದು, ಹಾಲಿ ಇರುವ ಹುದ್ದೆಗಳನ್ನು ಹೊಂದಾಣಿಕೆ ಮಾಡಿದ ನಂತರ ಅಗತ್ಯವಿರುವ 2 ಹೆಚ್ಚುವರಿ ಹುದ್ದೆಗಳನ್ನು ಸೃಜಿಸಲಾಗಿದೆ. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 2ರಲ್ಲಿ ನೀಡಲಾಗಿದೆ. |

| 1 | 2 | 3 | | | 4 | 5 | 6 | 7 | 8 |
|---|---|---|---|---|---|---|---|---|---|
| 5 | ಹಿರಿಯ ಉಪ ನಿರ್ದೇಶಕರು (Senior Deputy Director) | 9 | 72 | 81 | 20 | – | 20 | 36300–53850 | ಉಪ ನಿಯಂತ್ರಕರ ಹುದ್ದೆಯನ್ನು ಮರು ಪದನಾಮೀಕರಿಸಿರುವುದು. ಮಹಾನಗರ ಪಾಲಿಕೆಗಳು ಇಲ್ಲದೆ ಇರುವ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಲ್ಲಿ ಹಾಲಿ ಸಹಾಯಕ ನಿಯಂತ್ರಕರು ಮುಖ್ಯಸ್ಥರಾಗಿರುವ ಕಛೇರಿಗಳಿಗೆ ಹಿರಿಯ ಉಪ ನಿರ್ದೇಶಕರ ಹುದ್ದೆಗಳನ್ನು ಸೃಜಿಸಲಾಗಿದೆ. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 3ರಲ್ಲಿ ನೀಡಲಾಗಿದೆ. |
| 6 | ಉಪ ನಿರ್ದೇಶಕರು (Deputy Director) | 34 | 206 | 240 | 09 | 5 | 4 | 28100–50100 | ಸಹಾಯಕ ನಿಯಂತ್ರಕರ ಹುದ್ದೆಯನ್ನು ಮರು ಪದನಾಮೀಕರಿಸಿರುವುದು. ಕೇಂದ್ರ ಕಛೇರಿಗೆ 6 ಹುದ್ದೆಗಳನ್ನು 4 ಪ್ರಾಂತೀಯ ಕಛೇರಿಗಳಿಗೆ 4 ಹುದ್ದೆಯನ್ನು ಸೃಜಿಸಲು ಉದ್ದೇಶಿಸಿದ್ದು 1 ಹುದ್ದೆಗಳನ್ನು ವಿಶ್ವವಿದ್ಯಾಲಯಕ್ಕೆ ಸ್ಥಳಾಂತರಿಸಲು ಉದ್ದೇಶಿಸಲಾಗಿದ್ದು 9 ಹುದ್ದೆಗಳನ್ನು ಸೃಜಿಸಲಾಗಿದೆ.<br>ಹುದ್ದೆಗಳ ವಿವರಗಳನ್ನು ಅನುಬಂಧ –3 ಕೋಷ್ಟಕ 4ರಲ್ಲಿ ನೀಡಲಾಗಿದೆ. |
| 7 | ಲೆಕ್ಕಪರಿಶೋಧನಾಧಿಕಾರಿ (Audit Officer) | 91 | 390 | 481 | 43 | 22 | 21 | 22800–43200 | ಕೇಂದ್ರ ಕಛೇರಿಗೆ 5 ಹೆಚ್ಚುವರಿ ಹುದ್ದೆಗಳು ಮತ್ತು 4 ಪ್ರಾಂತೀಯ ಕಛೇರಿಗಳಿಗೆ 38 ಹುದ್ದೆಗಳನ್ನು ಸೃಜಿಸಲಾಗಿದೆ.<br>1. ಬೆಂಗಳೂರು ಪ್ರಾಂತೀಯ ಕಛೇರಿ 11 ಹುದ್ದೆಗಳು.<br>2. ಬೆಳಗಾವಿ ಪ್ರಾಂತೀಯ ಕಛೇರಿ 11 ಹುದ್ದೆಗಳು.<br>3. ಕಲಬುರಗಿ ಪ್ರಾಂತೀಯ ಕಛೇರಿ 08 ಹುದ್ದೆಗಳು.<br>4. ಮೈಸೂರು ಪ್ರಾಂತೀಯ ಕಛೇರಿ 09 ಹುದ್ದೆಗಳು.<br>ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 5ರಲ್ಲಿ ನೀಡಲಾಗಿದೆ. |

| 1 | 2 | 3 | | | 4 | 5 | 6 | 7 | 8 |
|---|---|---|---|---|---|---|---|---|---|
| 8 | ಸಿಸ್ಟಮ್ ಅನಾಲಿಸ್ಟ್ | – | – | – | 01 | 01 | – | 20000–36300 | ಕೇಂದ್ರ ಕಛೇರಿಗೆ ಹೊಸದಾಗಿ ಸೃಜಿಸಲಾದ ಹುದ್ದೆ. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 6ರಲ್ಲಿ ನೀಡಲಾಗಿದೆ. |
| 9 | ಲೆಕ್ಕಾಧೀಕ್ಷಕರು (Account Superintendent) | 38 | 654 | 692 | 50 | – | 50 | 21600–40050 | 4 ಪ್ರಾಂತೀಯ ಕಛೇರಿಗಳಿಗೆ 34 ಹುದ್ದೆಗಳು, ಪ್ರಸ್ತುತ ಲೆಕ್ಕ ಅಧೀಕ್ಷಕರ ಹುದ್ದೆ ಮಂಜೂರಾಗಿರದೆ ಇರುವ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ 15 ಹುದ್ದೆಗಳು ಮತ್ತು ಕೇಂದ್ರ ಕಛೇರಿಗೆ 1 ಹುದ್ದೆ ಸೃಜಿಸಲಾಗಿದೆ. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಠಕ 7ರಲ್ಲಿ ನೀಡಲಾಗಿದೆ. |
| 10 | ಲೆಕ್ಕ ಸಹಾಯಕರು (Account Assistant) | 398 | 1573 | 1971 | 11 | 8 | 3 | 14550–26700 | 4 ಪ್ರಾಂತೀಯ ಕಛೇರಿಗಳಿಗೆ ಹಾಲಿ ಲಭ್ಯವಿರುವ ಹುದ್ದೆಗಳನ್ನು ಹೊಂದಾಣಿಕೆ ಮಾಡಿದ ನಂತರ ಸೃಜಿಸಲಾದ ಹೆಚ್ಚುವರಿ ಹುದ್ದೆಗಳು. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 8ರಲ್ಲಿ ನೀಡಲಾಗಿದೆ. |
| 11 | ಶೀಘ್ರಲಿಪಿಗಾರರು (Stenographer) | 7 | – | 7 | 16 | 12 | 4 | 14550–26700 | ಕೇಂದ್ರ ಕಛೇರಿಯ ಜಾಗೃತ ಕೋಶಕ್ಕೆ 3 ಹುದ್ದೆಗಳು ಪ್ರಾಂತೀಯ ಕಛೇರಿಗಳಿಗೆ 8 ಹುದ್ದೆಗಳು ಮತ್ತು ಜಂಟಿ ನಿಯಂತ್ರಕರು ಮುಖ್ಯಸ್ಥರಾಗಿರುವ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ 5 ಹುದ್ದೆಗಳನ್ನು ಸೃಜಿಸಲಾಗಿದೆ. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 9ರಲ್ಲಿ ನೀಡಲಾಗಿದೆ. |

| 1 | 2 | 3 | | | 4 | 5 | 6 | 7 | 8 |
|---|---|---|---|---|---|---|---|---|---|
| 12 | ಕಿರಿಯ ಲೆಕ್ಕ ಸಹಾಯಕರು (Junior Account Assistant) | 42 | 714 | 756 | 11 | 10 | 1 | 11600–21000 | ಕೇಂದ್ರ ಕಛೇರಿಗೆ 8 ಹುದ್ದೆಗಳು (ಜಾಗೃತ ಕೋಶ, ತರಬೇತಿ ಕೋಶ, ಉಪ–ನಿರ್ದೇಶಕರು (ಆಡಳಿತ ಮತ್ತು ಲೆಕ್ಕ ಪರಿಶೋಧನಾ ಶಾಖೆಗಳಿಗೆ) 4 ಪ್ರಾಂತೀಯ ಕಛೇರಿಗಳಿಗೆ 4 ಹುದ್ದೆಗಳು. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 10ರಲ್ಲಿ ನೀಡಲಾಗಿದೆ. |
| 13 | ಬೆರಳಚ್ಚುಗಾರರು/ಡಾಟಾ ಎಂಟ್ರಿ ಆಪರೇಟರ್ (Typist/Data entry operator) | 62 | 3 | 65 | 26 | 26 | – | 11600–21000 | ಕೇಂದ್ರ ಕಛೇರಿಗೆ 10 ಹುದ್ದೆಗಳು ಪ್ರಾಂತೀಯ ಕಛೇರಿಗಳಿಗೆ 16 ಹುದ್ದೆಗಳು. ಹುದ್ದೆಗಳ ವಿವರಗಳನ್ನು ಅನುಬಂಧ–3 ಕೋಷ್ಟಕ 11ರಲ್ಲಿ ನೀಡಲಾಗಿದೆ. |
| 14 | ವಾಹನ ಚಾಲಕರು (Drivers) | 2 | – | 2 | 50 | 45 | 5 | 11600–21000 | ಕೇಂದ್ರ ಕಛೇರಿಗೆ 8 ಹುದ್ದೆಗಳು 12 ಪ್ರಾಂತೀಯ ಕಛೇರಿಗಳಿಗೆ 20 ಹುದ್ದೆಗಳು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ 30ಹುದ್ದೆಗಳು. ಹುದ್ದೆಗಳು ವಿವರಗಳನ್ನು ಅನುಬಂಧ–3 ಕೋಷ್ಟಕ 12ರಲ್ಲಿ ನೀಡಲಾಗಿದೆ. |
| 15 | ಗ್ರೂಪ್ 'ಡಿ'/ಅಟೆಂಡೆಂಟ್ (Group 'D' Attendant) | 61 | 10 | 71 | 53 | 53 | – | 11000–19000 | ಕೇಂದ್ರ ಕಛೇರಿಗೆ 11 ಹುದ್ದೆಗಳು ಪ್ರಾಂತೀಯ ಕಛೇರಿಗಳಿಗೆ 24 ಹುದ್ದೆಗಳು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ 18 ಹೆಚ್ಚುವರಿ ಹುದ್ದೆಗಳು. ಹುದ್ದೆಗಳು ವಿವರಗಳನ್ನು ಅನುಬಂಧ–3 ಕೋಷ್ಟಕ 13ರಲ್ಲಿ ನೀಡಲಾಗಿದೆ. |
| | **ಒಟ್ಟು** | **758** | **3724** | **4482** | **297*** | **182** | **115** | **–** | **–** |

***ಟಿಪ್ಪಣಿ : ಲೆಕ್ಕಪರಿಶೋಧನೆ ವಿಭಾಗದಲ್ಲಿ ಒಟ್ಟು 297 ಹುದ್ದೆಗಳು ಸೃಜಿಸಲಾಗಿದೆ.**

ಎನ್.ಲಕ್ಷ್ಮಣ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

**ಅನುಬಂಧ– 3ಕ್ಕೆ ಲಗತ್ತಿಸಿದ ಕೋಷ್ಟಕಗಳು**

**ಸರ್ಕಾರದ ಆದೇಶ ಸಂಖ್ಯೆ: ಆಇ 331 ರಾಲೆಪ 2014, ದಿನಾಂಕ: 18.05.2015.**

**ಕೋಷ್ಟಕ–1**

**ಅಪರ ನಿರ್ದೇಶಕರು ಹುದ್ದೆಗಳು –4 (ಸೃಜನೆ)**

**ವೇತನ ಶ್ರೇಣಿ–44250–1050–45300–1200–52500–1350–60600**

| | | |
|---|---|---|
| 1 | ಪ್ರಾಂತೀಯ ಕಛೇರಿ ಬೆಂಗಳೂರು | 1 ಹುದ್ದೆ |
| 2 | ಪ್ರಾಂತೀಯ ಕಛೇರಿ ಮೈಸೂರು | 1 ಹುದ್ದೆ |
| 3 | ಪ್ರಾಂತೀಯ ಕಛೇರಿ ಬೆಳಗಾವಿ | 1 ಹುದ್ದೆ |
| 4 | ಪ್ರಾಂತೀಯ ಕಛೇರಿ ಕಲಬುರಗಿ | 1 ಹುದ್ದೆ |

**ಕೋಷ್ಟಕ–2**

**ಜಂಟಿ ನಿರ್ದೇಶಕರು ಹುದ್ದೆಗಳು –2 (ಸೃಜನೆ)**

**ವೇತನ ಶ್ರೇಣಿ–40050–1050–45300–1200–52500–1350–56550**

| | | |
|---|---|---|
| 1 | ತುಮಕೂರು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ | 1 ಹುದ್ದೆ |
| 2 | ಶಿವಮೊಗ್ಗ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ | 1 ಹುದ್ದೆ |

ಟಿಪ್ಪಣಿ : ಕೇಂದ್ರ ಕಛೇರಿಯ (ಆಡಳಿತ ಮತ್ತು ಮಾನವ ಸಂಪನ್ಮೂಲ) ಹುದ್ದೆಗೆ ಸರ್ಕಾರಿ ಲೆಕ್ಕಪರಿಶೋಧಕರು ಜಿ.ಕೆ.ವಿ.ಕೆ ಬೆಂಗಳೂರು ಕಛೇರಿಯಲ್ಲಿರುವ ಜಂಟಿ ನಿಯಂತ್ರಕರ ಹುದ್ದೆಯನ್ನು ಸ್ಥಳಾಂತರಿಸಲಾಗಿದೆ.

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

**ಕೋಷ್ಟಕ–3**

**ಹಿರಿಯ ಉಪ ನಿರ್ದೇಶಕರು 20 ಹುದ್ದೆಗಳು (ಸೃಜನೆ)**

**ವೇತನ ಶ್ರೇಣಿ–36300–900–39000–1050–45300–1200–52500–1350–53850**

**ಮಹಾನಗರ ಪಾಲಿಕೆಗಳು ಇಲ್ಲದೆ ಇರುವ ಕೆಳಕಂಡ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ ಸೃಜಿಸಲಾದ ಹುದ್ದೆಗಳು**

| | | |
|---|---|---|
| 1 | ಬೆಂಗಳೂರು | 1 ಹುದ್ದೆ |
| 2 | ಚಿಕ್ಕಬಳ್ಳಾಪುರ | 1 ಹುದ್ದೆ |
| 3 | ರಾಮನಗರ | 1 ಹುದ್ದೆ |
| 4 | ಚಿತ್ರದುರ್ಗ | 1 ಹುದ್ದೆ |
| 5 | ಕೋಲಾರ | 1 ಹುದ್ದೆ |
| 6 | ವಿಜಯಪುರ | 1 ಹುದ್ದೆ |
| 7 | ಬಾಗಲಕೋಟೆ | 1 ಹುದ್ದೆ |
| 8 | ಹಾವೇರಿ | 1 ಹುದ್ದೆ |
| 9 | ಗದಗ | 1 ಹುದ್ದೆ |
| 10 | ಕಾರವಾರ | 1 ಹುದ್ದೆ |
| 11 | ಮಡಿಕೇರಿ | 1 ಹುದ್ದೆ |
| 12 | ಚಾಮರಾಜನಗರ | 1 ಹುದ್ದೆ |
| 13 | ಮಂಡ್ಯ | 1 ಹುದ್ದೆ |
| 14 | ಹಾಸನ | 1 ಹುದ್ದೆ |

| | | |
|---|---|---|
| 15 | ಉಡುಪಿ | 1 ಹುದ್ದೆ |
| 16 | ಚಿಕ್ಕಮಗಳೂರು | 1 ಹುದ್ದೆ |
| 17 | ಬೀದರ | 1 ಹುದ್ದೆ |
| 18 | ಯಾದಗಿರಿ | 1 ಹುದ್ದೆ |
| 19 | ರಾಯಚೂರು | 1 ಹುದ್ದೆ |
| 20 | ಕೊಪ್ಪಳ | 1 ಹುದ್ದೆ |

**ಕೋಷ್ಟಕ–4**

**ಉಪ ನಿರ್ದೇಶಕರು 9 ಹುದ್ದೆಗಳು (ಸೃಜನೆ)**

**ವೇತನ ಶ್ರೇಣಿ–28100–700–28800–800–33600–900–39000–1050–45300–1200–50100**

| | | |
|---|---|---|
| **ಕೇಂದ್ರ ಕಛೇರಿ – 6 ಹುದ್ದೆಗಳು** | | |
| 1 | ಉಪ ನಿರ್ದೇಶಕರು (ಲೆಕ್ಕ ಪರಿಶೋದನೆ) | 2 ಹುದ್ದೆ |
| 2 | ಜಾಗೃತ ಕೋಶ | 4 ಹುದ್ದೆ |
| **ಪ್ರಾಂತೀಯ ಕಛೇರಿಗಳು –4 ಹುದ್ದೆಗಳು** | | |
| 1 | ಬೆಂಗಳೂರು | 1 ಹುದ್ದೆ |
| 2 | ಮೈಸೂರು | 1 ಹುದ್ದೆ |
| 3 | ಬೆಳಗಾವಿ | 1 ಹುದ್ದೆ |
| 4 | ಕಲಬುರಗಿ | 1 ಹುದ್ದೆ |
| **ಹೊಂದಾಣಿಕೆ ಮಾಡಬೇಕಾಗಿರುವ ಹುದ್ದೆ** | | |
| 1 | ಬೆಂಗಳೂರು ವಿಶ್ವವಿದ್ಯಾಲಯ | 1 ಹುದ್ದೆ |

**ಎನ್.ಲಕ್ಷ್ಮಣ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

**ಕೋಷ್ಟಕ–5**

**ಲೆಕ್ಕಪರಿಶೋಧನಾ ಅಧಿಕಾರಿಗಳು 43 ಹುದ್ದೆಗಳು (ಸೃಜನೆ)**

**ವೇತನ ಶ್ರೇಣಿ–22800–600–24600–700–28800–800–33600–900–39000–1050–43200**

| | | |
|---|---|---|
| **1** | **ಕೇಂದ್ರ ಕಛೇರಿಯ ಜಾಗೃತಕೋಶ** | **5 ಹುದ್ದೆಗಳು** |
| **ಪ್ರಾಂತೀಯ ಕಛೇರಿಗಳು –38 ಹುದ್ದೆಗಳು** | | |
| 1 | ಬೆಂಗಳೂರು | 11 ಹುದ್ದೆಗಳು |
| 2 | ಮೈಸೂರು | 09 ಹುದ್ದೆಗಳು |
| 3 | ಬೆಳಗಾವಿ | 10 ಹುದ್ದೆಗಳು |
| 4 | ಕಲಬುರಗಿ | 08 ಹುದ್ದೆಗಳು |

**ಕೋಷ್ಟಕ–6**

**ಸಿಸ್ಟಮ್ ಅನಾಲಿಸ್ಟ್ –1 ಹುದ್ದೆ (ಸೃಜನೆ)**

**ವೇತನ ಶ್ರೇಣಿ–20000–500–21000–600–24600–700–28800–800–33600–900–36300**

| | | |
|---|---|---|
| 1 | ಕೇಂದ್ರ ಕಛೇರಿಯ | 1 ಹುದ್ದೆ |

**ಎನ್.ಲಕ್ಷ್ಮಣ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

**ಕೋಷ್ಟಕ–7**

**ಲೆಕ್ಕ ಅಧೀಕ್ಷಕರು–50 ಹುದ್ದೆಗಳು (ಸೃಜನೆ)**

**ವೇತನ ಶ್ರೇಣಿ–21600–600–24600–700–28800–800–33600–900–39000–1050–40050**

| | | |
|---|---|---|
| **1** | **ಕೇಂದ್ರ ಕಛೇರಿಯ ತರಬೇತಿ ಕೋಶ** | **1 ಹುದ್ದೆ** |
| **ಪ್ರಾಂತೀಯ ಕಛೇರಿಗಳು –34 ಹುದ್ದೆಗಳು** | | |
| 1 | ಬೆಂಗಳೂರು | 10 ಹುದ್ದೆಗಳು |
| 2 | ಮೈಸೂರು | 08 ಹುದ್ದೆಗಳು |
| 3 | ಬೆಳಗಾವಿ | 09 ಹುದ್ದೆಗಳು |
| 4 | ಕಲಬುರಗಿ | 07 ಹುದ್ದೆಗಳು |
| **ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ 15 ಹುದ್ದೆಗಳು** | | |
| 1 | ಶಿವಮೊಗ್ಗ | 1 ಹುದ್ದೆ |
| 2 | ತುಮಕೂರು | 1 ಹುದ್ದೆ |
| 3 | ಹಾಸನ | 1 ಹುದ್ದೆ |
| 4 | ಮಡಿಕೇರಿ | 1 ಹುದ್ದೆ |
| 5 | ಮಂಡ್ಯ | 1 ಹುದ್ದೆ |
| 6 | ಧಾರವಾಡ | 1 ಹುದ್ದೆ |
| 7 | ಕಾರವಾರ | 1 ಹುದ್ದೆ |
| 8 | ಬಳ್ಳಾರಿ | 1 ಹುದ್ದೆ |
| 9 | ರಾಯಚೂರು | 1 ಹುದ್ದೆ |
| 10 | ದಾವಣಗೆರೆ | 1 ಹುದ್ದೆ |
| 11 | ರಾಮನಗರ | 1 ಹುದ್ದೆ |
| 12 | ಚಿಕ್ಕಬಳ್ಳಾಪುರ | 1 ಹುದ್ದೆ |
| 13 | ಚಾಮರಾಜನಗರ | 1 ಹುದ್ದೆ |
| 14 | ಉಡುಪಿ | 1 ಹುದ್ದೆ |
| 15 | ಬಾಗಲಕೋಟೆ | 1 ಹುದ್ದೆ |

**ಎನ್.ಲಕ್ಷ್ಮಣ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

**ಕೋಷ್ಟಕ–8**

**ಲೆಕ್ಕ ಸಹಾಯಕರು–11 ಹುದ್ದೆಗಳು (ಸೃಜನೆ)**

**ವೇತನ ಶ್ರೇಣಿ–14550–350–15600–400–17200–450–19000–500–21000–600–24600–700–26700**

| **ಪ್ರಾಂತೀಯ ಕಛೇರಿಗಳು–11 ಹುದ್ದೆಗಳು** | | |
|---|---|---|
| 1 | ಬೆಂಗಳೂರು | 3 ಹುದ್ದೆಗಳು |
| 2 | ಮೈಸೂರು | 3 ಹುದ್ದೆಗಳು |
| 3 | ಬೆಳಗಾವಿ | 3 ಹುದ್ದೆಗಳು |
| 4 | ಕಲಬುರಗಿ | 2 ಹುದ್ದೆಗಳು |

ಕೋಷ್ಟಕ–9

ಶೀಘ್ರಲಿಪಿಗಾರರು–16 ಹುದ್ದೆಗಳು (ಸೃಜನೆ)

ವೇತನ ಶ್ರೇಣಿ–14550–350–15600–400–17200–450–19000–500–21000–600–24600–700–26700

| | | |
|---|---|---|
| **1** | **ಕೇಂದ್ರ ಕಛೇರಿ ಜಾಗೃತದಳ** | **3 ಹುದ್ದೆಗಳು** |
| **ಪ್ರಾಂತೀಯ ಕಛೇರಿಗಳು–8 ಹುದ್ದೆಗಳು** | | |
| 1 | ಬೆಂಗಳೂರು | 2 ಹುದ್ದೆಗಳು |
| 2 | ಮೈಸೂರು | 2 ಹುದ್ದೆಗಳು |
| 3 | ಬೆಳಗಾವಿ | 2 ಹುದ್ದೆಗಳು |
| 4 | ಕಲಬುರಗಿ | 2 ಹುದ್ದೆಗಳು |
| **ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳು–5 ಹುದ್ದೆಗಳು** | | |
| 1 | ತುಮಕೂರು | 1 ಹುದ್ದೆ |
| 2 | ಶಿವಮೊಗ್ಗ | 1 ಹುದ್ದೆ |
| 3 | ಧಾರವಾಡ | 1 ಹುದ್ದೆ |
| 4 | ಕಲಬುರಗಿ | 1 ಹುದ್ದೆ |
| 5 | ಬಳ್ಳಾರಿ | 1 ಹುದ್ದೆ |

**ಎನ್.ಲಕ್ಷ್ಮಣ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

**ಕೋಷ್ಟಕ–10**

**ಕಿರಿಯ ಲೆಕ್ಕ ಸಹಾಯಕರು –11 ಹುದ್ದೆಗಳು (ಸೃಜನೆ)**

**ವೇತನ ಶ್ರೇಣಿ–11600–200–12000–250–13000–300–14200–350–15600–400–17200–450–19000–500–21000**

| **ಕೇಂದ್ರ ಕಛೇರಿ 7 ಹುದ್ದೆಗಳು** | | |
|---|---|---|
| 1 | ಜಾಗೃತ ಕೋಶ | 1 ಹುದ್ದೆ |
| 2 | ತರಬೇತಿ ಕೋಶ | 1 ಹುದ್ದೆ |
| 3 | ಉಪ ನಿರ್ದೇಶಕರು ಆಡಳಿತ | 1 ಹುದ್ದೆ |
| 4 | ಲೆಕ್ಕಪರಿಶೋಧನಾ ಶಾಖೆ | 4 ಹುದ್ದೆ |

| ಪ್ರಾಂತೀಯ ಕಛೇರಿಗಳು –4 ಹುದ್ದೆಗಳು | | |
|---|---|---|
| 1 | ಬೆಂಗಳೂರು | 1 ಹುದ್ದೆ |
| 2 | ಮೈಸೂರು | 1 ಹುದ್ದೆ |
| 3 | ಬೆಳಗಾವಿ | 1 ಹುದ್ದೆ |
| 4 | ಕಲಬುರಗಿ | 1 ಹುದ್ದೆ |

**ಕೋಷ್ಟಕ–11**

**ಬೆರಳಚ್ಚುಗಾರರು/ಡಾಟಾ ಎಂಟ್ರಿ ಆಪರೇಟರ್ - 26 ಹುದ್ದೆಗಳು (ಸೃಜನೆ)**

**ವೇತನ ಶ್ರೇಣಿ–11600–200–12000–250–13000–300–14200–350–15600–400–17200–450–19000–500–21000**

| | | |
|---|---|---|
| **1** | **ಕೇಂದ್ರ ಕಛೇರಿ** | **10 ಹುದ್ದೆಗಳು** |
| **ಪ್ರಾಂತೀಯ ಕಛೇರಿಗಳು –16 ಹುದ್ದೆಗಳು** | | |
| 1 | ಬೆಂಗಳೂರು | 4 ಹುದ್ದೆಗಳು |
| 2 | ಮೈಸೂರು | 4 ಹುದ್ದೆಗಳು |
| 3 | ಬೆಳಗಾವಿ | 4 ಹುದ್ದೆಗಳು |
| 4 | ಕಲಬುರಗಿ | 4 ಹುದ್ದೆಗಳು |

**ಎನ್.ಲಕ್ಷ್ಮಣ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

**ಕೋಷ್ಟಕ–12**

**ವಾಹನ ಚಾಲಕರು -50 ಹುದ್ದೆಗಳು (ಸೃಜನೆ)**

**ವೇತನ ಶ್ರೇಣಿ–11600–200–12000–250–13000–300–14200–350–15600–400–17200–450–19000–500–21000**

| | | |
|---|---|---|
| **1** | **ಕೇಂದ್ರ ಕಛೇರಿ** | **09 ಹುದ್ದೆಗಳು** |
| **ಪ್ರಾಂತೀಯ ಕಛೇರಿಗಳು – 12 ಹುದ್ದೆಗಳು** | | |
| 1 | ಬೆಂಗಳೂರು | 3 ಹುದ್ದೆಗಳು |
| 2 | ಮೈಸೂರು | 3 ಹುದ್ದೆಗಳು |
| 3 | ಬೆಳಗಾವಿ | 3 ಹುದ್ದೆಗಳು |
| 4 | ಕಲಬುರಗಿ | 3 ಹುದ್ದೆಗಳು |
| **ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ – 29 ಹುದ್ದೆಗಳು** | | |
| 1 | 29 ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳಿಗೆ ತಲಾ | 1 ಹುದ್ದೆ |

**ಕೋಷ್ಟಕ–13**

**ಗ್ರೂಪ್ 'ಡಿ' - 53 ಹುದ್ದೆಗಳು (ಸೃಜನೆ)**

**ವೇತನ ಶ್ರೇಣಿ–11000–200–12000–250–13000–300–14200–350–15600–400–17200–450–19000**

| | | |
|---|---|---|
| **1** | **ಕೇಂದ್ರ ಕಛೇರಿ** | **11 ಹುದ್ದೆಗಳು** |
| **ಪ್ರಾಂತೀಯ ಕಛೇರಿಗಳು – 24 ಹುದ್ದೆ ಗಳು** | | |
| 1 | ಬೆಂಗಳೂರು | 6 ಹುದ್ದೆಗಳು |
| 2 | ಮೈಸೂರು | 6 ಹುದ್ದೆಗಳು |
| 3 | ಬೆಳಗಾವಿ | 6 ಹುದ್ದೆಗಳು |
| 4 | ಕಲಬುರಗಿ | 6 ಹುದ್ದೆಗಳು |

**ಎನ್.ಲಕ್ಷ್ಮಣ**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

## ಅನುಬಂಧ–4

**ಸರ್ಕಾರದ ಆದೇಶ ಸಂಖ್ಯೆ ಆಇ 331 ರಾಲೆಪ 2014, ದಿನಾಂಕ: 18.05.2015.**

**ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯಲ್ಲಿನ ವಿವಿಧ ಇಲಾಖೆಗಳಲ್ಲಿ/ಸಂಸ್ಥೆಗಳಲ್ಲಿ ವಿವಿಧ ಹುದ್ದೆಗಳಲ್ಲಿ ಗ್ರೂಪ್–ಎ ವೃಂದಗಳ ಪದನಾಮವನ್ನು ಈ ಕೆಳಕಂಡಂತೆ ಮರು ಪದನಾಮೀಕರಿಸಲಾಗಿದೆ.**

1) ನಿಯಂತ್ರಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಹುದ್ದೆಯ ಪದನಾಮವನ್ನು ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಎಂದು ಮರು ಪದನಾಮೀಕರಿಸಿದೆ.

2) ಲೆಕ್ಕಪರಿಶೋಧನೆ ವಿಭಾಗಕ್ಕೆ ಅನ್ವಯವಾಗುವಂತೆ ಈ ಕೆಳಕಂಡಂತೆ ಹುದ್ದೆಗಳನ್ನು ಮರು ಪದನಾಮೀಕರಿಸಿದೆ.

| ಲೆಕ್ಕಪತ್ರ ವಿಭಾಗದಲ್ಲಿನ ಪದನಾಮ | ಲೆಕ್ಕಪರಿಶೋಧನೆ ವಿಭಾಗದಲ್ಲಿನ ಮರು ಪದನಾಮ |
|---|---|
| 1. ಅಪರ ನಿಯಂತ್ರಕರು (Additional Controller) | ಅಪರ ನಿರ್ದೇಶಕರು (Additional Director) |
| 2. ಜಂಟಿ ನಿಯಂತ್ರಕರು (Joint Controller) | ಜಂಟಿ ನಿರ್ದೇಶಕರು (Joint Director) |
| 3. ಉಪ ನಿಯಂತ್ರಕರು (Deputy Controller) | ಹಿರಿಯ ಉಪ ನಿರ್ದೇಶಕರು (Senior Deputy Director) |
| 4. ಸಹಾಯಕ ನಿಯಂತ್ರಕರು (Assistant Controller) | ಉಪ ನಿರ್ದೇಶಕರು (Deputy Director) |

ಎನ್.ಲಕ್ಷ್ಮಣ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಆಡಳಿತ ಮತ್ತು ಮುಂಗಡಗಳು)

PR-464
SC-200

## ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

**ವಿಷಯ :** ಶ್ರೀಮತಿ ಅಪರ್ಣಾ ಪಾವಟೆ, ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ಸಚಿವಾಲಯ ನಿಯೋಜನೆ ಮೇಲೆ ತಹಶೀಲ್ದಾರ್, ವಿಜಯಪುರ, ಇವರ ವಿರುದ್ಧ ದಾಖಲಾಗಿರುವ ಲೋಕಾಯುಕ್ತ ಟ್ರ್ಯಾಪ್ ಪ್ರಕರಣ–ಸರ್ಕಾರಿ ಸೇವೆಯಿಂದ ಅಮಾನತುಗೊಳಿಸುವ ಬಗ್ಗೆ.

**ಓದಲಾಗಿದೆ :**

1. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ:ಲೋಕ್/ಐಎನ್‌ವಿ(ಜಿ)ಎಲ್–02/ಸಿಆರ್–02/2015/ವಿಜಯಪುರ, ದಿನಾಂಕ 7–2–2015.
2. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02 ಸೇಇವಿ 2015 ದಿನಾಂಕ 20–03–2015
3. ಸರ್ಕಾರದ ಪತ್ರ ಸಂಖ್ಯೆ ಸಿಆಸುಇ 02 ಸೇಇವಿ 2015 ದಿನಾಂಕ 24–03–2015
4. ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ ಲೋಕ್/ಐಎನ್‌ವಿ(ಜಿ)ಎಲ್–02/ಸಿಆರ್–02/2015/ವಿಜಯಪುರ, ದಿನಾಂಕ 8–6–2015

**ಪ್ರಸ್ತಾವನೆ :**

ಅಪರ ಪೋಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮಸಂಖ್ಯೆ–1ರ ಪತ್ರದಲ್ಲಿ ಶ್ರೀ ರಮೇಶ ತಂದೆ ಹಣಮಂತ ಬಿದನೂರ, ಸಾ. ನವರಸಪುರ ಕಾಲನಿ, ವಿಜಯಪುರ ಇವರು ದಿನಾಂಕ 19–1–2015ರಂದು ವಿಜಯಪುರ ಲೋಕಾಯುಕ್ತ ಪೊಲೀಸ್ ಠಾಣೆಗೆ ಹಾಜರಾಗಿ ಶ್ರೀಮತಿ ಅಪರ್ಣಾ ಪಾವಟೆ, ತಹಶೀಲ್ದಾರರು, ವಿಜಯಪುರ (ಆರೋಪಿ–1) ಹಾಗೂ ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ, ಗ್ರಾಮ ಲೆಕ್ಕಾಧಿಕಾರಿ, ಬರಟಗಿ, ವಿಜಯಪುರ (ಆರೋಪಿ–2) ಇವರುಗಳ ವಿರುದ್ಧ ದೂರನ್ನು ನೀಡಿ, ತಮಗೆ ಭೂಮಿ ವಿಕಾಸ ಎಂಬ ಸಂಸ್ಥೆಯ ವತಿಯಿಂದ ನಿವೇಶನಗಳನ್ನು ಅಭಿವೃದ್ಧಿಪಡಿಸಿ ಮಾರಾಟ ಮಾಡುವ ಸಲುವಾಗಿ ವಿಜಯಪುರ ತಾಲ್ಲೂಕಿನ ತೊರವಿ ಗ್ರಾಮದ ರಿ.ಸರ್ವೆ ನಂ. 580/2, 581/1, 581/2ಅ ಹಾಗೂ 581/2ಬ, 569/2ಎ ಜಮೀನುಗಳ ಭೂ ಬದಲಾವಣೆಗಾಗಿ ಭೂಸ್ವಾಧೀನ ಕಾಯಿದೆ ಕಲಂ 1960ರ 79 (ಎ) ಹಾಗೂ (ಬಿ) ಉಲ್ಲಂಘನೆ ಆಗದಿರುವ ಬಗ್ಗೆ ಮತ್ತು ಸದರಿ ಜಮೀನುಗಳ ಪಿ.ಟಿ.ಸಿ.ಎಲ್. ಕಾಯಿದೆ ಉಲ್ಲಂಘನೆ ಆಗದಿರುವ ಬಗ್ಗೆ ಮಾನ್ಯ ತಹಶೀಲ್ದಾರ್, ವಿಜಯಪುರ ಇವರು ಪ್ರಮಾಣ ಪತ್ರ ನೀಡುವ ಸಲುವಾಗಿ ಸುಮಾರು 2–3 ತಿಂಗಳುಗಳಿಂದ ವಿಳಂಬ ಮಾಡುತ್ತಾ, ಗ್ರಾಮ ಲೆಕ್ಕಾಧಿಕಾರಿ ಶ್ರೀ ಶಂಕರಗೌಡ ತಂದೆ ಬಸವನಗೌಡ ಬಿರಾದಾರ